ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail: bcuccb @gmail.com / registrarbcu@gmail.com

ಸಂಖ್ಯೆ:ಬಿಸಿಯು/01/ಪರೀಕ್ಷಾ/ಪ.ವೇ.ಪ/2020 /21 | 730 ದಿನಾಂಕ:03.09.2020

## ಸುತ್ತೋಲೆ

### ವಿಷಯ: 4ನೇ ಸೆಮೆಸ್ಟರ್ ಸ್ನಾತಕೋತ್ತರ ಪರೀಕ್ಷಾ ದಿನಾಂಕಗಳನ್ನು ಮುಂದೂಡುವ ಬಗ್ಗೆ.

*****

ಬೆಂಗಳೂರು ಕೇಂದ್ರ(ನಗರ) ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳ ಅಂತಿಮ ಸೆಮೆಸ್ಟರ್ ಪರೀಕ್ಷೆಗಳು ಮತ್ತು ಈಗ ನಾಲ್ಕನೇ ಸೆಮೆಸ್ಟರುಗಳಲ್ಲಿರುವ ವಿದ್ಯಾರ್ಥಿಗಳು, ಎರಡನೇ ಸೆಮೆಸ್ಟರಿನಲ್ಲಿ ಬಾಕಿ ಉಳಿಸಿಕೊಂಡಿರುವ ವಿಷಯಗಳಿಗೆ ದಿನಾಂಕ 10.09.2020 ರಿಂದ ಪರೀಕ್ಷೆ ನಡೆಸಲು ವೇಳಾಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಕೆಲವು ವಿದ್ಯಾರ್ಥಿಗಳ ಪೋಷಕರು ಮತ್ತು ಅಧ್ಯಾಪಕರುಗಳು ಪರೀಕ್ಷೆಗಳನ್ನು ಮುಂದೂಡುವಂತೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ, ದಿನಾಂಕ 03.09.2020 ರಂದು ಬೆಂಗಳೂರು ಕೇಂದ್ರ(ನಗರ) ವಿಶ್ವವಿದ್ಯಾಲಯದ ಎಲ್ಲಾ ಡೀನರುಗಳ ಮತ್ತು ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರ ಜೊತೆ ಸಭೆ ನಡೆಸಿ ವಿದ್ಯಾರ್ಥಿಗಳ ಮನವಿಯನ್ನು ಚರ್ಚಿಸಿ, ಪರೀಕ್ಷೆಗಳನ್ನು ಮುಂದೂಡಲು ತೀರ್ಮಾನಿಸಿರುವುದರಿಂದ ಈಗ ಪ್ರಕಟಿಸಲಾಗಿರುವ ವೇಳಾಪಟ್ಟಿ ಪ್ರಕಾರ ದಿನಾಂಕ 10.09.2020 ರಿಂದ ಪ್ರಾರಂಭವಾಗಬೇಕಿದ್ದ ಎಲ್ಲಾ ಸ್ನಾತಕೋತ್ತರ (M.B.A ಹೊರತು ಪಡಿಸಿ) ಕೋರ್ಸುಗಳ ಪರೀಕ್ಷೆಗಳು ದಿನಾಂಕ 21.09.2020 ರಿಂದ ಪ್ರಾರಂಭವಾಗಲಿವೆ. M.B.A, B.P.Ed ಮತ್ತು B.Ed ಕೋರ್ಸುಗಳ ಪರೀಕ್ಷೆಗಳು ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ನಡೆಯಲಿವೆ.

ಸ್ನಾತಕೋತ್ತರ ಕೋರ್ಸುಗಳ ಪ್ರಾಯೋಗಿಕ ಪರೀಕ್ಷೆಗಳು(Practical Examinations) ದಿನಾಂಕ 10.09.2020 ರಿಂದ 19.09.2020ರ ಒಳಗೆ ನಡೆಯಲಿವೆ. ಸ್ನಾತಕೋತ್ತರ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಪರೀಕ್ಷಾ ದಿನಗಳಂದು ಒಂದು ಪ್ರತ್ಯೇಕ ಕೊಠಡಿ ಮೀಸಲಿಟ್ಟು, ಒಂದು ವೇಳೆ ಯಾರಾದರೂ ಆರೋಗ್ಯ ಸಮಸ್ಯೆ ಇರುವ ವಿದ್ಯಾರ್ಥಿಗಳಿಗೆ ಆ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲು ತಿಳಿಸಲಾಗಿದೆ. ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವಂತೆ ಕೋರಲಾಗಿದೆ. ಈ ವಿಚಾರದಲ್ಲಿ ಎಲ್ಲರ ಸಹಕಾರ ಬಯಸಿದೆ.

ಕುಲಸಚಿವರು(ಮೌಲ್ಯಮಾಪನ)
Registrar (Evaluation)
Bengaluru Central University
Central College Campus
Bengaluru-560 001.

ಗೆ,

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾಲಯದ ಸಂಯೋಜನೆಗೊಂಡಿರುವ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:

1. ಕುಲಪತಿಗಳು/ಕುಲಸಚಿವ ಅವರ ವಿಶೇಷಾಧಿಕಾರಿಗಳು. ಬೆಂಗಳೂರು ಕೇಂದ್ರ(ನಗರ) ವಿಶ್ವವಿದ್ಯಾಲಯ, ಬೆಂಗಳೂರು.
2. ವಿತ್ತಾಧಿಕಾರಿಗಳು, ಬೆಂಗಳೂರು ಕೇಂದ್ರ(ನಗರ) ವಿಶ್ವವಿದ್ಯಾಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಬೆಂಗಳೂರು ಕೇಂದ್ರ(ನಗರ) ವಿಶ್ವವಿದ್ಯಾಲಯ, ಬೆಂಗಳೂರು –